










ART - REACH
special lecture followed by an interactive programme













ಉದಯವಾಣಿ ಸುದಿನ
ಮಂಗಳೂರು ಸಮಾಚಾರ
ಜುಲೈ 24 । 2016 । ರವಿವಾರ

## ಕಲೆ। ಮುಂಗಾರು ಚಿತ್ರಕಲಾ ಪ್ರದರ್ಶನ ಉದ್ಘಾಟನೆ

# 'ಚಿತ್ರಕಲೆ ವೀಕ್ಷಕರಿಗೆ ಅರ್ಥವಾಗುವಂತಿರಲಿ'

**ಮಣ್ಣಗುಡ್ಡೆ** ಜು. 23: ಮಂಗಳೂರು ವಿಶ್ವವಿದ್ಯಾನಿಲಯದ ಎನ್. ಜಿ. ಪಾವಂಜೆ ಚೇರ್ ಇನ್ ಫೈನ್ ಆರ್ಟ್ಸ್, ಆರ್ಟ್ ಕೆನರಾ ಮಂಗಳೂರು ಹಾಗೂ ನಗರದ ಎಸ್‌ಕ್ಯೂಬ್ ಆರ್ಟ್ ಗ್ಯಾಲರಿಯ ಸಹಯೋಗದಲ್ಲಿ ಆಯೋಜನೆಗೊಂಡಿರುವ ಮುಂಗಾರು ಚಿತ್ರಕಲಾ ಪ್ರದರ್ಶನ ಶನಿವಾರ ಮಣ್ಣಗುಡ್ಡೆ ಗುರ್ಜಿ ಸರ್ಕಲ್‌ನ ಎಸ್‌ಕ್ಯೂಬ್ ಆರ್ಟ್ ಗ್ಯಾಲರಿಯಲ್ಲಿ ಉದ್ಘಾಟನೆಗೊಂಡಿತು.

ಪ್ರದರ್ಶನವನ್ನು ಉದ್ಘಾಟಿಸಿದ ಮಂಗಳೂರು ವಿ.ವಿ.ಯ ಕುಲಪತಿ ಪ್ರೊ । ಕೆ.ಬೈರಪ್ಪ ಮಾತನಾಡಿ, ಚಿತ್ರ ಕಲಾವಿದರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಎನ್.ಜಿ.ಪಾವಂಜೆ ಆರ್ಟ್ಸ್ ಕಾರ್ಯನಿರ್ವಹಿಸುತ್ತಿದೆ. ಪ್ರತಿಷ್ಠಿತ ಕಲಾವಿದ ಎನ್.ಜಿ.ಪಾವಂಜೆ ಅವರು ಮೈಸೂರಿನ ಅರಸರ ಸಹಕಾರದಿಂದ ಜರ್ಮನಿಯಲ್ಲಿ ಉನ್ನತ ವ್ಯಾಸಂಗ ಮಾಡಿದವರು. ಅವರ ಹೆಸರನ್ನು ಶಾಶ್ವತವಾಗಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯ ಶ್ರಮಿಸುತ್ತಿದೆ ಎಂದರು.

ಪಾವಂಜೆ ಅವರ ಪುತ್ರಿ ಅನುಸೂಯಾ ಪಾವಂಜೆ ಮಾತನಾಡಿ, ಚಿತ್ರಕಲೆ ಎಂಬುದು ನೇರವಾಗಿ ವೀಕ್ಷಕನಿಗೆ ಅರ್ಥವಾಗುವಂತಾಗಬೇಕು. ಆದರೆ ಇಂದು ಆಧುನಿಕತೆಯ ಹೆಸರಿನಲ್ಲಿ ಕಲೆಯನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದೆ. ಈ ಕುರಿತು ಪ್ರತಿಯೊಬ್ಬ ಕಲಾವಿದ ಚಿಂತಿಸಬೇಕು ಎಂದರು.



ಮುಂಗಾರು ಚಿತ್ರಕಲಾ ಪ್ರದರ್ಶನವನ್ನು ಪ್ರೊ । ಕೆ.ಬೈರಪ್ಪ ಉದ್ಘಾಟಿಸಿದರು.

ವೇದಿಕೆಯಲ್ಲಿ ಮಂಗಳೂರು ಆಕಾಶವಾಣಿಯ ನಿಲಯ ನಿರ್ದೇಶಕ ಡಾ । ವಸಂತ ಕುಮಾರ್ ಪೆರ್ಲ, ಪ್ರೊ। ಸುರೇಶ್ ಜಯರಾಮ್, ಎಸ್ ಕ್ಯೂಬ್ ಆರ್ಟ್ ಗ್ಯಾಲರಿಯ ಶಶಾಂಕ್ ಶೆಟ್ಟಿ ಉಪಸ್ಥಿತರಿದ್ದರು.

ಎನ್. ಜಿ. ಪಾವಂಜೆ ಚೇರ್ ಇನ್ ಫೈನ್ ಆರ್ಟ್ಸ್‌ನ ಸಂಯೋಜಕ ಡಾ । ರವಿಶಂಕರ್ ರಾವ್ ಸ್ವಾಗತಿಸಿದರು. ಬಳಿಕ ಆರ್ಟ್ ರೀಚ್ ಸಂವಾದ ನಡೆಯಿತು. ಈ ಪ್ರದರ್ಶನವು ಜು. 30ರ ವರೆಗೆ ಬೆಳಗ್ಗೆ 10.30ರಿಂದ ರಾತ್ರಿ 8ರ ವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗಲಿದೆ.

